ಮೇಲಿನ ಕೈಯು ಕೆಳಗಿನ ಕೈಗಿಂತ ಉತ್ತಮವಾಗಿದೆ

ಅಬ್ದುಲ್ಲಾ ಇಬ್ನ್ ಉಮರ್ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಮಿಂಬರ್ (ಪ್ರವಚನ ಪೀಠ) ನ
ಮೇಲೆ ನಿಂತು, ದಾನ-ಧರ್ಮ, (ಭಿಕ್ಷೆ ಬೇಡುವುದರಿಂದ) ದೂರವಿರುವುದು, ಮತ್ತು ಬೇಡುವುದು ಮುಂತಾದವುಗಳ ಬಗ್ಗೆ ಉಲ್ಲೇಖಿಸುತ್ತಾ ಹೇಳಿದರು: "ಮೇಲಿನ ಕೈಯು ಕೆಳಗಿನ ಕೈಗಿಂತ ಉತ್ತಮವಾಗಿದೆ. ಮೇಲಿನ ಕೈ ಎಂದರೆ ಖರ್ಚು ಮಾಡುವ ಕೈ, ಮತ್ತು ಕೆಳಗಿನ ಕೈ ಎಂದರೆ ಬೇಡುವ
ಕೈ".
[صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಮಿಂಬರ್ನ ಮೇಲೆ ಪ್ರವಚನ ನೀಡುತ್ತಿರುವಾಗ ದಾನ-ಧರ್ಮದ ಬಗ್ಗೆ ಮತ್ತು ಭಿಕ್ಷೆ ಬೇಡುವುದರಿಂದ ದೂರವಿರುವುದರ ಬಗ್ಗೆ ಉಲ್ಲೇಖಿಸಿದರು. ನಂತರ ಹೇಳಿದರು: ನೀಡುವ ಮತ್ತು ಖರ್ಚು ಮಾಡುವ ಮೇಲಿನ ಕೈಯು, ಬೇಡು ಕೆಳಗಿನ ಕೈಗಿಂತ ಉತ್ತಮವಾಗಿದೆ ಮತ್ತು ಅಲ್ಲಾಹನಿಗೆ ಹೆಚ್ಚು ಪ್ರಿಯವಾಗಿದೆ.

http://sunnah.global/hadeeth/kn/show/3599